ಕೊಡುವವನ ಮೇಲೂ ಲಂಚ ಪಡೆಯುವವನ ಮೇಲೂ ಅಲ್ಲಾಹನ ಶಾಪವಿದೆ.' ಲಂಚ ಪಡೆಯುವುದು ಎಷ್ಟು ಅಪರಾಧವೋ ಲಂಚ ಕೊಡುವುದೂ ಅಷ್ಟೇ ಅಪರಾಧವಾಗಿದೆ. ಲಂಚ ಕೊಡುವವನು ಲಂಚಕೋರರನ್ನು ಆ ಮೂಲಕ ಪ್ರೋತ್ಸಾಹಿಸಿದಂತಾಗುತ್ತದೆ.

ಭ್ರಷ್ಟಾಚಾರವನ್ನು ಕೊನೆಗಾಣಿಸ ಬೇಕಾದರೆ ವ್ಯಕ್ತಿಯ ನೈತಿಕ ಪ್ರಜ್ಞೆಯನ್ನು ಬಲ ಪಡಿಸುವುದು ಮತ್ತು ಭ್ರಷ್ಟಾಚಾರವು ಒಂದು ಅಪರಾಧ ಮತ್ತು ಪಾಪವಾಗಿದೆ ಎನ್ನುವ ಒಂದು ವಾತಾವರಣವನ್ನು ರಚಿಸುವುದು ಅಗತ್ಯವಾಗಿದೆ. ಇದಾದ ನಂತರವೇ ಕಾನೂನಿನ ನಿಜವಾದ ಪಾಲನೆ ಸಾಧ್ಯ.

ಹೌದು! ಕೆಡುಕು ಮುಕ್ತ ಉತ್ತಮ ಸಮಾಜಕ್ಕಾಗಿ ಸಜ್ಜನರು ಒಂದುಗೂಡುವುದು ಕಾಲದ ಅನಿವಾರ್ಯ ಬೇಡಿಕೆಯಾಗಿದೆ. ಜನರು ಮೂಕ ಪ್ರೇಕ್ಷಕರಾದಲ್ಲಿ ಮಾತ್ರ ಕೆಡುಕುಗಳು ಹೆಚ್ಚುತ್ತವೆ. ಹಾಗೂ ಆ ಕೆಡುಕುಗಳು ಇಡೀ ಸಮಾಜವನ್ನೇ ಆವರಿಸಿ ಬಿಡುವಂತಹ ಕಾಲ ಘಟ್ಟಕ್ಕೆ ಬಂದು ತಲುಪುತ್ತವೆ. ಎಲ್ಲಾ ರೀತಿಯ ಕೆಡುಕುಗಳ ವಿರುದ್ಧ ಧ್ವನಿಯೆತ್ತಬೇಕಾದುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಸಮಾಜದಲ್ಲಿರುವ ಸಜ್ಜನರು ಸಂಘಟಿತರಾಗಿ ಒಳಿತಿನ ಪ್ರಚಾರ ಹಾಗೂ ಕೆಡುಕಿನ ನಿರ್ಮೂಲನೆಗಾಗಿ ಸಕ್ರಿಯವಾಗಿ, ಕಂಕಣ ಬದ್ಧರಾಗಿ ಹೋರಾಡಿದಲ್ಲಿ ಮಾತ್ರ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬಹುದು.

ಈ ನಿಟ್ಟಿನಲ್ಲಿ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವ ದೀರ್ಘಕಾಲೀನ ಪರಂಪರೆಯುಳ್ಳ ಜಮಾಅತೆ ಇಸ್ಲಾಮಿ ಹಿಂದ್, ಕರ್ನಾಟಕವು **ಡಿಸೆಂಬರ್ 2011ರ 9ರಿಂದ 18ರ** ವರೆಗೆ ಭ್ರಷ್ಟಾಚಾರ ಮತ್ತು ಇನ್ನಿತರೇ ಸಾಮಾಜಿಕ ಕೆಡುಕುಗಳ ವಿರುದ್ಧ **'ಕೆಡುಕು ಮುಕ್ತ ಸಮಾಜದೆಡೆಗೆ'** ಎಂಬ ರಾಜ್ಯವ್ಯಾಪಿ ಅಭಿಯಾನ ವನ್ನು ಆಯೋಜಿಸುತ್ತಲಿದೆ.

ಬನ್ನಿ, ಕೆಡುಕು ಮುಕ್ತ ಸಮಾಜದೆಡೆಗೆ ಸಾಗಲು ಮತ್ತು ಒಳಿತನ್ನು ಪ್ರೇರೇಪಿಸಲು ಒಂದು ಅವಿರತ ಹೋರಾಟಕ್ಕಾಗಿ ಕೈಜೋಡಿಸೋಣ.

# ಕೆಡುಕು ಮುಕ್ತ ಸಮಾಜದೆಡೆಗೆ

## ಭ್ರಷ್ಟಾಚಾರದ ನಿರ್ಮೂಲನೆ ಹೇಗೆ?

**ರಾಜ್ಯ ವ್ಯಾಪಿ ಅಭಿಯಾನ**

**2011 ಡಿಸೆಂಬರ್ 9 ರಿಂದ 18**

**ಜಮಾಅತೆ ಇಸ್ಲಾಮಿ ಹಿಂದ್, ಕರ್ನಾಟಕ**
**Shanthi Sadan, 2nd Main, 1st Block,**
**R.T. Nagar, Bangalore-560 032.**
**Tel: 080-23432273 Email: jihkar@gmail.com**
**Web Site: www.jihkarnataka.org**

**ನ**ಮ್ಮ ಸಮಾಜವು ಇಂದು ಅನೇಕ ಕೆಡುಕುಗಳಿಂದ ತೊಳಲಾಡುತ್ತಿದೆ. ಭ್ರಷ್ಟಾಚಾರ ಮತ್ತು ಲಂಚವಂತೂ ಸರ್ವ ವ್ಯಾಪಿಯಾಗಿ ಸಮಾಜಕ್ಕೆ ಅಂಟಿಕೊಂಡಿರುವ ಮಾರಕ ರೋಗಗಳಾಗಿ ಮಾರ್ಪಟ್ಟಿದೆ. ಅದರ ವ್ಯಾಪಕತೆಯ ಪ್ರಮಾಣವೆಷ್ಟಾಗಿದೆಯೆಂದರೆ, ಅದರಲ್ಲಿ ಒಳಗೊಂಡಿರುವ ಅಪಾರ ಪ್ರಮಾಣದ ಹಣವನ್ನು ಊಹಿಸಲೂ ಜನಸಾಮಾನ್ಯರಿಗಂತೂ ಸಾಧ್ಯವಾಗುತ್ತಿಲ್ಲ. ಇಂದಿನ ಈ ಅವ್ಯವಸ್ಥೆಗೆ ಮೂಲ ಕಾರಣ ಮನುಷ್ಯನ ದುರಾಸೆ. ರಾಜಕಾರಣಿಗಳು, ಅಧಿಕಾರಿಗಳು, ಬಂಡವಾಳಶಾಹಿಗಳು ಈ ವ್ಯವಸ್ಥೆಯ ರೂವಾರಿಗಳು.

ನಮ್ಮ ಆರ್ಥಿಕ ವ್ಯವಸ್ಥೆಯು ಏರುಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ, ಬಡವರ ಮತ್ತು ನಿರಾಶ್ರಿತರ ಸಂಖ್ಯೆ ಹಾಗೂ ಬವಣೆ ಹೆಚ್ಚುತ್ತಿದೆ. ಹಿಂಸೆ, ಅನ್ಯಾಯ, ಅಕ್ರಮ ಮತ್ತು ಸಾಮಾಜಿಕ ತಾರತಮ್ಯಗಳು ಹೆಚ್ಚುತ್ತಲಿದೆ. ಮೋಸ, ಅಪ್ರಾಮಾಣಿಕತೆ, ಕಳ್ಳಸಂತೆ, ಕಲಬೆರಕೆ, ಕಳ್ಳಸಾಗಾಣಿಕೆ ಇತ್ಯಾದಿಗಳಂತಹ ಸಮಾಜಬಾಹಿರ ಚಟುವಟಿಕೆಗಳು ಶೀಘ್ರ ಹಣ ಸಂಪಾದನೆಯ ದಾರಿಗಳಾಗಿವೆ. ಸಾರ್ವಜನಿಕ ಜೀವನದಲ್ಲಿ ಸ್ವಜನ ಪಕ್ಷಪಾತ, ಶೋಷಣೆ, ಹಣ ಸುಲಿಗೆ, ಬೇಜವಾಬ್ದಾರಿತನ ಮತ್ತು ಭ್ರಷ್ಟ ಆಡಳಿತವು ಸರ್ವವ್ಯಾಪಿಯಾಗಿದ್ದು ತೀರಾ ಸಾಮಾನ್ಯವೆಂದೆನಿಸಿಬಿಟ್ಟಿದೆ. ರಾಜಕೀಯ ಅಪರಾಧೀಕರಣ, ಶಿಕ್ಷಣದ ವ್ಯಾಪಾರೀಕರಣ ಮತ್ತು ಬಂಡವಾಳಶಾಹಿ ಕೇಂದ್ರೀಕೃತ ಆರ್ಥಿಕತೆಗಳು ಹೆಚ್ಚುತ್ತಿವೆ. ಒಟ್ಟಿನಲ್ಲಿ ಜನ ಸಾಮಾನ್ಯರಿಗೆ ಅವರ ಹಕ್ಕುಗಳು ದೊರೆಯುವುದು ದುಸ್ತರವಾಗಿ ಬಿಟ್ಟಿದೆ.

21ನೇ ಶತಮಾನದ ಈ ಆಧುನಿಕ ಯುಗದಲ್ಲಿ ನಾವು ವೈಜ್ಞಾನಿಕತೆ, ತಾಂತ್ರಿಕತೆ ಹಾಗೂ ನಾಗರಿಕತೆಯ ಪ್ರಗತಿಯ ಉತ್ತುಂಗ ಸ್ಥಿತಿಯಲ್ಲಿದ್ದರೂ ನೈತಿಕ, ಆಧ್ಯಾತ್ಮಿಕ ಹಾಗೂ ಮಾನವೀಯ ಅಧಃಪತನವು ನಮ್ಮನ್ನು ವಿನಾಶದ ಹಾದಿಯತ್ತ ಕೊಂಡೊಯ್ಯುತ್ತಿದೆ. ಎಲ್ಲಿಯವರೆಗೆಂದರೆ, ಉತ್ತಮ ಶಿಕ್ಷಣವನ್ನು ನೀಡಿ, ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ರೂಪಿಸಬೇಕಾದ ಶಿಕ್ಷಣ ಸಂಸ್ಥೆಗಳಲ್ಲೂ, ಜನರಿಗೆ ಮಾರ್ಗದರ್ಶನವನ್ನು ನೀಡಬೇಕಾದ ಧಾರ್ಮಿಕ ಕೇಂದ್ರಗಳಲ್ಲೂ ಭ್ರಷ್ಟಾಚಾರ, ಲಂಚ ಇತ್ಯಾದಿ ಕೆಡುಕುಗಳು ತಾಂಡವವಾಡುತ್ತಿದೆ. ಇದು ನಮ್ಮ ದುರಂತ ವಲ್ಲವೇ...?

ಹೌದು! ಭ್ರಷ್ಟಾಚಾರವು ಇಂದು ನಮ್ಮ ಸಮಾಜದಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿದೆ. ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳಲ್ಲೂ ಇದರ ಹಿಡಿತ ಬಿಗಿಯಾಗಿದೆ. ಸಮಾಜದಲ್ಲಿ ಯಾರೂ ಇದರ ಪ್ರಭಾವದಿಂದ ಮುಕ್ತರಾಗಿಲ್ಲ. ಭ್ರಷ್ಟಾಚಾರ ಮತ್ತು ಲಂಚದ ಪ್ರಾಯೋಗಿಕ ಸ್ವರೂಪವನ್ನು ಅವಲೋಕಿಸಿದರೆ ಅದರಲ್ಲೂ ಅನೇಕ ಬದಲಾವಣೆಗಳುಂಟಾಗಿರುವುದು ಕಾಣಬಹುದು. ಅವು ಇಂದು ಕೇವಲ ಹಣಕ್ಕೆ ಸೀಮಿತವಾಗಿ ಉಳಿದಿಲ್ಲ. ಉಡುಗೊರೆ ಗಳು, ವಿಮಾನ ಯಾನದ ಟಿಕೇಟ್, ಪಂಚತಾರಾ ಹೊಟೇಲ್‌ಗಳಲ್ಲಿ ವಾಸ್ತವ್ಯ, ಭವ್ಯ ಸತ್ಕಾರ ಕೂಟಗಳು, ಕಾರುಗಳು, ಬಂಗ್ಲೆ, ಫಾರ್ಮ್ ಹೌಸ್‌ಗಳು ಇತ್ಯಾದಿ ಎಲ್ಲವೂ ಇದರಲ್ಲಿ ಒಳಗೊಂಡಿದೆ.

ಭ್ರಷ್ಟಾಚಾರವನ್ನು ತಡೆಗಟ್ಟಲು ಸರಕಾರವು ಲೋಕಾಯುಕ್ತ, Anti Corruption Bureau, ಸಿಬಿಐ, ಇಂಟಲಿಜೆನ್ಸ್ ಮತ್ತು ಎನ್‌ಫೋರ್ಸ್‌ಮೆಂಟ್‌ಗಳಂತಹ ಸಂಸ್ಥೆಗಳನ್ನು ಸ್ಥಾಪಿಸಿದೆ. ಆದರೆ 'ಚಿಕಿತ್ಸೆ ಹೆಚ್ಚಿದಂತೆ ರೋಗವೂ ಉಲ್ಬಣವಾಗುತ್ತಿದೆ' ಎಂಬಂತೆ ಅವು ನಿಲ್ಲುವುದು ಕಾಣುವುದಿಲ್ಲ. ಇದರ ಪರಿಣಾಮವಾಗಿ ಸಾರ್ವಜನಿಕರ ಸಹನೆ ಮತ್ತು ತಾಳ್ಮೆ ಕಟ್ಟೆಯೊಡೆದ ಪ್ರಸಂಗಗಳನ್ನು ನಾವು ಕಾಣುತ್ತಿದ್ದೇವೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವಂತಹ ಚಳುವಳಿಗಳು, ಪ್ರತಿಭಟನೆಗಳು ವಿಶೇಷವಾಗಿ ಭಾರತದ ಭ್ರಷ್ಟಾಚಾರ ವಿರೋಧಿ ಆಂದೋಲನಗಳು, ಅರಬ್ ದೇಶಗಳ ಕ್ರಾಂತಿ, ಅಮೆರಿಕಾದ Occupy Wallstreet ನಂತಹ ಪ್ರತಿಭಟನೆಗಳು ಇದಕ್ಕೆ ತಾಜಾ ಉದಾಹರಣೆಗಳು.

ಎಲ್ಲಾ ಕೆಡುಕುಗಳಿಗೂ ಖಂಡಿತವಾಗಿಯೂ ಪರಿಹಾರವಿದೆ. ಮಾನವನ ಮನಸ್ಸಿನಲ್ಲಿ ಪರಲೋಕ ಪ್ರಜ್ಞೆಯನ್ನು ಜಾಗೃತಗೊಳಿಸಿ ತನ್ನ ಕರ್ಮಗಳ ವಿಚಾರಣೆಯು ಪರಲೋಕದಲ್ಲಿ ನಡೆಯಲಿದ್ದು, ಅನುಚಿತ ರೀತಿಯಲ್ಲಿ ಅಥವಾ ಅನ್ಯಾಯವಾಗಿ ಇತರರ ಸೊತ್ತನ್ನು ಕಬಳಿಸಿದರೆ ಕಠಿಣ ಶಿಕ್ಷೆ ಲಭಿಸಲಿದೆಯೆಂಬ ಪ್ರಜ್ಞೆಯು ಅವನನ್ನು ಭ್ರಷ್ಟಾಚಾರ, ಲಂಚ ಇತ್ಯಾದಿ ಕೆಡುಕುಗಳಿಂದ ದೂರವಿರಿಸುತ್ತದೆ.

ಮನುಷ್ಯನು ಇದ್ದುದರಲ್ಲಿ ತೃಪ್ತಿಪಟ್ಟಾಗ ಎಲ್ಲಾ ಸಮಸ್ಯೆ ಗಳು ಪರಿಹಾರವಾಗುತ್ತದೆ. ಪ್ರವಾದಿ ಮುಹಮ್ಮದ್(ಸ) ಹೀಗೆ ಹೇಳಿದ್ದಾರೆ- 'ಶ್ರೀಮಂತಿಕೆ ಎಂಬುದು ಸಂಪತ್ ಸೌಕರ್ಯಗಳ ಆಧಿಕ್ಯದ ಹೆಸರಲ್ಲ, ಮನಸ್ಸಿನ ಶ್ರೀಮಂತಿಕೆಯೇ ನಿಜವಾದ ಶ್ರೀಮಂತಿಕೆ'. ಮನಸ್ಸು ಸಂತೃಪ್ತವಾಗಿದ್ದರೆ ಸಂಪತ್ತಿನ ಮೋಹವು ಮನುಷ್ಯನನ್ನು ಕಾಡುವುದಿಲ್ಲ. ಹೆಚ್ಚೆಚ್ಚು ಸಂಪತ್ತನ್ನು ಗಳಿಸುವ ಮೋಹವೇ ಮನುಷ್ಯನಿಂದ ಅನುಚಿತ ರೀತಿಯಲ್ಲಿ, ಅಂದರೆ ಲಂಚ, ಭ್ರಷ್ಟಾಚಾರಗಳ ಮೂಲಕ ಧನ-ಕನಕಗಳನ್ನು ಶೇಖರಿಸಲು ಪ್ರೇರೇಪಿಸುತ್ತದೆ.

ಲಂಚಕೋರರು ಮತ್ತು ಭ್ರಷ್ಟಾಚಾರಿಗಳಿಗೆ ಭಯಾನಕ ಶಿಕ್ಷೆಯ ಎಚ್ಚರಿಕೆ ನೀಡಲಾಗಿದೆ. ಪ್ರವಾದಿ(ಸ) ಹೇಳಿದ್ದಾರೆ- 'ಲಂಚ